## ಯಾರು ಜಿಪುಣ?

ಅಂದು ಶೀನಿ ಕಚೇರಿಯಿಂದ ಬಂದವನೇ ತುಂಬಾ ತಲೆನೋವು ಎಂದು ಮಲಗಿದ್ದ. ಮಲಗಿದರೂ ತಲೆನೋವು ಕಡಿಮೆ ಆಗದಾಗ, ಹೊರಗಡೆ ಆಡುತ್ತಿದ್ದ ತನ್ನ ಏಳು ವರ್ಷದ ಮಗ ಗೋಪಿಯನ್ನು ಕೂಗಿ 'ಗೋಪೀ.. ಹೋಗಿ ಪಕ್ಕದ ಮನೆ ಅಂಕಲ್ ಹತ್ರ ಮೆಂಥೋ ಪ್ಲಸ್ ಇಸ್ಕೊಂಡು ಬಾರೋ' ಎಂದ.

'ಆಯ್ತು ಅಪ್ಪ' ಎನ್ನುತ್ತ ಹೋದ ಗೋಪಿ ಎರಡೇ ನಿಮಿಷದಲ್ಲಿ ಬಂದವ, ' ಅಪ್ಪಾ ಅಂಕಲ್ ಹತ್ರ ಅದು ಇಲ್ವಂತೆ' ಎಂದ. ಆಗ ಶೀನಿ 'ಹೋಗ್ಲಿ ಬಿಡು ಆ ಜಿಪುಣ ಏನು ಕೊಟ್ಟಾನು... ಒಂದು ಕೆಲಸ ಮಾಡು ಅದು ನನ್ನ ಬೀರುವಿನ ಮೇಲ್ಗಡೆ ಬಲಭಾಗದಲ್ಲಿ ಇದೆ ತಂದುಕೊಡು' ಎಂದ. ಗೋಪಿ ಹೋಗಿ ಅದನ್ನು ತಂದು ಕೊಟ್ಟು, 'ಇವರಲ್ಲಿ ಯಾರು ಜಿಪುಣರು?' ಎಂದು ತನ್ನಷ್ಟಕ್ಕೆ ತಾನೇ ಪ್ರಶ್ನೆ ಹಾಕಿಕೊಳ್ಳುತ್ತಾ ಮತ್ತೆ ಆಟಕ್ಕೆ ಹೋದ.

**ಅರವಿಂದ ಜಿ. ಜೋಷಿ**





ಕಲೆ: ಗಣೇಶ ಆಚಾರ್ಯ

## ಜಸ್ಟ್ ಬಿಗ್ ಬಾಸ್ಕೆಟ್

'ಆಯ್ತೇನೋ ಗುಂಡಾ ಎಷ್ಟು ಹೊತ್ತು? ಇನ್ನೂ ರೆಡಿಯಾಗೋಕೆ ಟೈಂ ಆಯ್ತು. ಅಪ್ಪ, ಅಣ್ಣ, ತಂಗಿ ಎಲ್ಲಾ ಕಾಯ್ತಾ ಇದ್ದಾರೆ' ಅಂದ್ರು ಅಮ್ಮ.

'ಆಯ್ತಾಯ್ತು ಜಸ್ಟ್ ಬಿಗ್ ಬಾಸ್ಕೆಟ್ ಅಷ್ಟೇ' ಅಂದ ಗುಂಡ. 'ಅದೇನೋ ಹಾಗಂದ್ರೇ.. ನಾನು ಯಾವ ಬಿಗ್ ಬಾಸ್ಕೆಟ್ಗೂ ಆರ್ಡರ್ ಕೊಟ್ಟಿಲ್ಲವಲ್ಲ. ಈಗ ಹೊರಡಬೇಕು ಅಷ್ಟೇ' ಅಂದ್ರು ಅಮ್ಮ. ಆಗ ಗುಂಡಾ 'ಅಯ್ಯೋ ಅಮ್ಮ, ಅಷ್ಟೂ ಗೊತ್ತಾಗಲ್ವಾ ಜಸ್ಟ್ ಬಿಗ್ ಬಾಸ್ಕೆಟ್ ಅಂದ್ರೆ. ಜಸ್ಟ್ ಹತ್ತು ನಿಮಿಷ' ಅಂತ ಅರ್ಥ ಅಷ್ಟೇ ಅಂದ. ಟಿ.ವಿಯಲ್ಲಿ ನೋಡು, ಅದೇ ಜಾಹೀರಾತು. ಹತ್ತು ನಿಮಿಷಕ್ಕೆ ಹೊಸ ಹೆಸರೇ 'ಬಿಗ್ ಬಾಸ್ಕೆಟ್' ಅಂತ ಬರ್ತಿರುತ್ತೆ ಎಂದು ಗುಂಡಾ ಅಂದಾಗ, 'ವಾವ್ ಗುಂಡಾ, ಚೆನ್ನಾಗಿ ಹೇಳ್ದೆ ನೋಡು' ಅಂತ ಅಮ್ಮ ನಕ್ಕರು.

**ಸುಮನಾ**